
ಗೋಪಾಲರಾವ್, ಹೊಸಪೇಟೆ
ದೇವಸ್ಥಾನದ ಗಂಟೆಗೂ, ಶಾಲೆಯ ಗಂಟೆಗೂ ಏನು ಸಾಮ್ಯ?



ಎರಡೂ ಗಂಟೆಗಳು ಮಿಕ್ಕೆಲ್ಲರ ಕಂಠವಡಗಿಸಿ ಒಂದೇ ಕಂಠ ಮೊಳಗಲು ಪ್ರೇರಕ.

ನಾಗರಾಜ ಪಿ. ನಾಯ್ಕ, ಖಾರ್ಗೆಜೂಗ
ಪಶ್ಚಿಮಘಟ್ಟಕ್ಕೆ ಕ್ಯಾನ್ಸರ್ ಎನಿಸುವ ಖನನವನ್ನು ನಿರ್ಬಂಧಿಸದಿದ್ದರೆ ಅಳಿವು ಖಂಡಿತವಲ್ಲವೆ?
ಆದೊಡೇಂ! ಪಶ್ಚಿಮಘಟ್ಟವನ್ನು ಅಂತಿಮ ಘಟ್ಟಕ್ಕೆ ತಲುಪಿಸಲು ಲಾಭಬಡುಕರು ಕಟಿಬದ್ಧರಂತೆ.

ಮಂಡಿ ಕುಮಾರ್, ಬೆಂಗಳೂರು
ಒಳ್ಳೆಯವರಾಗಲಿ, ಕೆಟ್ಟವರಾಗಲಿ, ಸತ್ತ ನಂತರ ಸ್ವರ್ಗಸ್ಥರಾದರು ಎನ್ನುವುದೇಕೆ?
ಅದು 'ಸೊರಗಿ ಅಸ್ತರಾದರು' ಎನ್ನುವುದರ ಅಪಭ್ರಂಶವಂತೆ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಭಾರತದಲ್ಲಿ ಬಡವರೇಕೆ ಶ್ರೀಮಂತರಾಗುತ್ತಿಲ್ಲ?



ದುಡಿಯುವ ಕೈಗಳು ಬೇಡುವ ಕೈಗಳು ಆಗುತ್ತಿರುವುದರಿಂದ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಉಗುಳಿ ಉಗುಳಿ ರೋಗ; ಬೊಗಳಿ ಬೊಗಳಿ ರಾಗ; ಈ ವಾಕ್ಯ ಎಲ್ಲಿಗೆ ಹೊಂದುತ್ತೆ?
ಉಗುಳುವಿಕೆ, ಬೊಗಳುವಿಕೆ ಎರಡೂ ಇರುವ ಪಾರ್ಲಿಮೆಂಟರಿ ಸೆಷನ್ನಿಗೆ.

ಫಾಲನೇತ್ರ ಸಜ್ಜನ, ಶಿರಸಿ
ಮುಡಾ+ಮೂಢ=?
ಎಲ್ಲ ಹಗರಣಗಳಂತೆಯೇ 'ಥಂಡಾ'.

ಎಂ.ಸಿ. ಧನ್ಯತಾ, ಬೆಂಗಳೂರು
ಶಿಕ್ಷಕನನ್ನು 'ಉಪಾಧ್ಯಾಯ' ಎಂದು ಕರೆಯುವುದೇಕೆ?
ಜೀವನವೆಂಬ ಬೃಹತ್ ಕಾದಂಬರಿಯಲ್ಲಿ ಆತನದು ಉಪ ಅಧ್ಯಾಯವಾದ್ದರಿಂದ.

ಕೆ.ಎಂ. ವಿಭೂತಿ, ಹರಿಹರ
ನಾಡಿನ ಎಲ್ಲ ಕನ್ಯೆಯರು ಸರ್ಕಾರಿ ವರ ಬೇಕು ಎಂದರೆ ಉಳಿದ ವರಗಳ ಗತಿ ಏನು?
ವಿದೇಶಿ ಕನ್ಯೆಯೊಡನೆ ವಿವಾಹ/ಲಿವಿನ್ ಟುಗೆದರ್ ಯೋಗ!

ಬೀ. ನಾಗರಾಜು, ಬೆಂಗಳೂರು
ಮದುವೆ ಆದಮೇಲೆ ಅತ್ತೆಮಾವ ಜೊತೆಯಲ್ಲಿ ಇರಬಾರದೆನ್ನುವ ಹುಡುಗಿಗೆ ನಿಮ್ಮ ಬುದ್ಧಿಮಾತು?
ಹೇಳಬೇಕಾದ್ದು ಹಿರಿಯರಿಗೇ; 'ಕೀಪ್ ಡಿಸ್ಟೆನ್ಸ್' ಎನ್ನುವುದೇ ಇಂದಿನ ಶಾಂತಿಮಂತ್ರ.

ಅನಸೂಯಾ ಟಿ., ಕೇದಿಗೆಮನೆ
ಸತ್ಯವನ್ನೇ ಹೇಳಿ; ನ್ಯಾಯ ಎಲ್ಲಿದೆ ರಾಮ್?
ನ್ಯಾಯಬೆಲೆ ಅಂಗಡಿಯ ಬೋರ್ಡಿನಲ್ಲಿ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಲಂಚಕ್ಕೂ, ಲಂಚ್‌ಗೂ ಸಾಮ್ಯತೆ ಇದೆಯೆ?
ಎರಡನ್ನೂ ಕಬಳಿಸುವುದು ಎಷ್ಟು ಮುಖ್ಯವೋ ಜೀರ್ಣಿಸಿಕೊಳ್ಳುವುದೂ ಅಷ್ಟೇ ಮುಖ್ಯ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ರಾಜಕೀಯ ವ್ಯಕ್ತಿಗಳಿಗೆ ಪುಢಾರಿಗಳು ಎನ್ನುವ ವಿಶೇಷಣ ಏಕೆ?
ಶ್ರೀಸಾಮಾನ್ಯನ ಆಕಾಂಕ್ಷೆಗಳನ್ನು ಪುಡಿಪುಡಿಯಾಗಿಸಲು ಅರಿತವನೇ ಪುಢಾರಿ!

ಎಲ್.ಐ.ಸಿ. ವಿಜೇಂದ್ರ, ಮೈಸೂರು
ಬೆಳಗ್ಗೆ ಎದ್ದು ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ ವಾಕಿಂಗ್ ಹೋಗುವ ಉದ್ದೇಶ?
ತಂಪಾದ ಹೊತ್ತಿನಲ್ಲಿ ಬಿಸಿಬಿಸಿ ಚರ್ಚೆ ಬೇಡವೆಂದು.

ಎನ್. ವೈದೇಹಿ, ಮೈಸೂರು
ಆಧುನಿಕತೆ ಬೆಳೆದಷ್ಟು ವೇಗದಲ್ಲೇ ದೈವಭಕ್ತಿಯೂ ಬೆಳೆಯುತ್ತಿರಲು ಕಾರಣವೇನು?
ಆಧುನಿಕತೆಯ ಅವಸ್ಥೆಗಳಿಂದ ದೇವರೇ ಕಾಪಾಡಬೇಕು ಎಂಬ ನಂಬಿಕೆ.

## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
'ಹುಚ್ಚಿಯ ಮದುವೆಯಲ್ಲಿ ಉಂಡವನೇ ಜಾಣ' ಎನ್ನುವರಲ್ಲ, ಹುಚ್ಚಿ ಯಾರನ್ನು ಮದುವೆ ಆಗುತ್ತಾಳೆ?
ಅವಳ ಚೆಲುವನ್ನು ಕಂಡು ಹುಚ್ಚ ಆದವನು.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ
ಶ್ರೀಕೃಷ್ಣನು ಮಹಾಭಾರತದ ಯುದ್ಧವೇ ಆಗದಂತೆ ತಡೆದಿದ್ದರೆ?
ಜಗತ್ತಿಗೆ ಭಗವದ್ಗೀತೆಯೇ ದೊರಕುತ್ತಿರಲಿಲ್ಲ.

ಹನುಮಂತಪ್ಪ ಕೊಳಗಿ, ಸಾಗರ
ಬೈಕ್ ಸವಾರರು ಹೊರಡುತ್ತಲೇ ಮೊಬೈಲನ್ನು ಕತ್ತಿಗೆ ಸಿಕ್ಕಿಸಿಕೊಂಡು ಮಾತಿಗಿಳಿಯುವುದು ಏನನ್ನು ಸೂಚಿಸುತ್ತದೆ?
ಮುಂದಿನ ಪೀಳಿಗೆಯ ಮಕ್ಕಳು ಹುಟ್ಟುತ್ತಲೇ ಕತ್ತು 45 ಡಿಗ್ರಿ ವಾಲಿರುತ್ತದೆ ಎಂದು.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇದುವರೆಗೆ ನಿದ್ರೆಯಿಂದ ಯಾರಿಗಾದರೂ ದುಃಖ ಆಗಿದೆಯಾ?



ಹೂಂ. ರೈಲಿನ ಸಿಳ್ಳೆಗೂ ಎಚ್ಚರವಾಗದೆ ಪ್ಲಾಟ್‌ಫಾರ್ಮ್‌ನಲ್ಲಿ ಮಲಗಿದ್ದವನಿಗೆ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಅಂದಿನ ವಠಾರಗಳಿಗೂ, ಇಂದಿನ ಅಪಾರ್ಟ್ಮೆಂಟ್‌ಗಳಿಗೂ ವ್ಯತ್ಯಾಸವೇನು?
ವಠಾರಕ್ಕೆ ಬಂದವರ ಬಗ್ಗೆ ವಠಾರಿಗರಿಗೆ ಇಂದಿನ ಸೆಕ್ಯುರಿಟಿ ಗಾರ್ಡಿಗಿಂತ ಹೆಚ್ಚು ಮಾಹಿತಿ ಇರುತ್ತಿತ್ತು.

ಬಿ. ಬಸವರಾಜ್, ಹರಿಹರ
ಬಾಂಡ್ ಸಿನಿಮಾಗಳಲ್ಲಿ ಬಾಂಡ್‌ನ ಸುತ್ತ ಅರೆಬೆತ್ತಲೆ ಹುಡುಗಿಯರು ಇರುವುದೇಕೆ?
ಕೂಡಲೆ ಎಲ್ಲೆಲ್ಲಿಗೋ ಹೋಗ ಬೇಕಾಗುವುದರಿಂದ 'ಟ್ರಾವಲ್ ಲೈಟ್' ಕ್ರಮವಂತೆ.

■ ರಾಮ್